**C.C.No.2177/2024**
**CW-2**
**PW-2**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್**

# ಸಿ.ಸಿ.ನಂ.2177/2024

| | | |
|---|---|---|
| ಸಾಕ್ಷಿದಾರನ ಹೆಸರು | :- | ಸೌಭಾಗ್ಯ |
| ಗಂಡನ ಹೆಸರು | :- | ನರಸಿಂಹ ಮೂರ್ತಿ |
| ವಯಸ್ಸು | :- | 47 ವರ್ಷ |
| ಉದ್ಯೋಗ | :- | ಗೃಹಿಣಿ |
| ವಾಸ | :- | ಜಕ್ಕಸಂದ್ರ, ನೆಲಮಂಗಲ. |

**ಸಾಕ್ಷಿಗೆ ದಿನಾಂಕಃ 21.05.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ಈ ಪ್ರಕರಣದ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿಯನ್ನು ನಾನು ನೋಡಿರುವುದಿಲ್ಲ. ಆರೋಪಿ ಗೈರು ಹಾಜರಿದ್ದು, ಆರೋಪಿಯ ಗುರುತಿಸುವಿಕೆಯಲ್ಲಿ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ. ಮೃತ ನರಸಿಂಹ ಮೂರ್ತಿ ನನ್ನ ಗಂಡ. ಚಾಸಾ.1 ಮತ್ತು ಚಾಸಾ.3 ನನ್ನ ಮಕ್ಕಳು. ಚಾಸಾ.4 ನನ್ನ ತಂಗಿ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ವಾಟೀ ಸವಾಲಿಗಾಗಿ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಗಿದೆ.)**

**ವಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದ.**

ದಿನಾಂಕ 05/05/2024 ರಂದು ಬೆಳಿಗ್ಗೆ ಸುಮಾರು 05.30 ರ ಸಮಯದಲ್ಲಿ ಕುಣಿಗಲ್ ನ ಹಾಸನ - ಬೆಂಗಳೂರು ಎನ್.ಹೆಚ್-75 ಮುಖ್ಯರಸ್ತೆಯಲ್ಲಿ ಬರುವ ಹಮಾಮ್ ಯೂ-ಟರ್ನ್ ಬಳಿಯ ಮುಖ್ಯರಸ್ತೆಯಲ್ಲಿ ನನ್ನ ಗಂಡ ನರಸಿಂಹಮೂರ್ತಿ, ನಾನು ಹಾಗೂ ಚಾಸಾ.1,3 ಮತ್ತು 4 ರವರು ಬೆಂಗಳೂರಿನಿಂದ ಬೆಳ್ಳೂರು ಕ್ರಾಸ್ ನ ಬಳಿ ಇರುವ ಆದಿ ಚುಂಚನಗಿರಿ ದೇವಸ್ಥಾನಕ್ಕೆ

ಹೋಗಲು ಕೆಎ-04-ಎಂಎ-5881 ನೇ ನಂಬರಿನ ಕಾರನ್ನು ನನ್ನ ಗಂಡ ಚಾಲನೆ ಮಾಡಿಕೊಂಡು ದೇವಸ್ಥಾನಕ್ಕೆ ಹೋಗುತ್ತಿರುವಾಗ್ಗೆ ಆರೋಪಿಯು ಕೆಎ-16-ಎ-8428 ನೇ ನಂಬರಿನ ಲಾರಿಯನ್ನು ಹಾಸನ ಕಡೆಯಿಂದ ಬೆಂಗಳೂರು ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಮತ್ತೆ ಮಾರ್ಕೋನಹಳ್ಳಿ ರಸ್ತಗೆ ಹೋಗಲೆಂದು ಯೂ-ಟರ್ನ್ ಬಳಿ ನಿಮ್ಮ ವಾಹನಕ್ಕೆ ಯಾವುದೇ ಇಂಡಿಕೇಟರ್ ಮತ್ತು ಸೂಚನೆಯನ್ನು ನೀಡದೇ ಅತಿವೇಗವಾಗಿ ದಕ್ಷಿಣ ಭಾಗದ ಬಲಭಾಗದ ರಸ್ತೆಗೆ ತಿರುಗಿಸಿ ಕಾರಿನ ಮುಂಭಾಗದ ಬಲಭಾಗಕ್ಕೆ ಗುದ್ದಿ ಅಪಘಾತವಾಗಿ ಎರಡು ವಾಹನಗಳು ಜಖಂಗೊಂಡಿದ್ದವು ಎಂದರೆ ಸಾಕ್ಷಿಯು ತಾನು ನಿದ್ದೆ ಮಾಡುತ್ತಿದ್ದ ಕಾರಣ, ಅಪಘಾತ ಹೇಗೆ ಆಯಿತು ಎಂದು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ.

ಅದೇ ದಿನ ಅದೇ ವೇಳೆ ಹಾಗೂ ಸ್ಥಳದಲ್ಲಿ, ಆರೋಪಿ ಅಪಘಾತಪಡಿಸಿದ ಪರಿಣಾಮ ಚಾಸಾ.3 ಬಲಹಣೆಗೆ ಪೆಟ್ಟಾಗಿ ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದವು ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಸದರಿ ಅಪಘಾತಪಡಿಸಿದ ಪರಿಣಾಮ ನನ್ನ ಗಂಡನ ತಲೆಗೆ, ಹಣೆಗೆ ಮತ್ತು ಕೈಕಾಲುಗಳಿಗೆ ತೀವ್ರ ತರಹದ ರಕ್ತಗಾಯಗಳಾಗಿ ಸ್ಥಳದಲ್ಲಿ ಮೃತಪಟ್ಟಿದ್ದರು ಎಂದರೆ ಸಾಕ್ಷಿಯು ತಾನು ನಿದ್ದೆ ಮಾಡುತ್ತಿದ್ದ ಕಾರಣ, ಅಪಘಾತ ಹೇಗೆ ಆಯಿತು ಎಂದು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ.

ಅದೇ ವೇಳೆ ಹಾಗೂ ಸ್ಥಳದಲ್ಲಿ, ಆರೋಪಿ ಅಪಘಾತಪಡಿಸಿದ ಪರಿಣಾಮ ನನ್ನ ಮುಖಕ್ಕೆ, ಎಡಕೈಗೆ ಹಾಗೂ ಚಾಸಾ.4 ರವರ ಮುಖಕ್ಕೆ ಪೆಟ್ಟಾಗಿ ಹಲ್ಲುಗಳ ಭಾಗಕ್ಕೆ ಗಂಭೀರ ಸ್ವರೂಪದ ರಕ್ತಗಾಯಗಳಾಗಿದ್ದವು ಎಂದರೆ ಸಾಕ್ಷಿಯು ತಾನು ನಿದ್ದೆ ಮಾಡುತ್ತಿದ್ದ ಕಾರಣ, ಅಪಘಾತ ಹೇಗೆ ಆಯಿತು ಎಂದು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ.

**C.C.No.2177/2024**
**CW-2**
**PW-2**

ಹಾಗೇಯೇ ಚಾಸಾ.1 ರವರಿಗೆ ಸಣ್ಣ ಪುಟ್ಟ ಗಾಯಗಳಾಗಿದ್ದವು ಎಂದರೆ ಸಾಕ್ಷಿಯು ತಾನು ನಿದ್ದೆ ಮಾಡುತ್ತಿದ್ದ ಕಾರಣ, ಅಪಘಾತ ಹೇಗೆ ಆಯಿತು ಎಂದು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಘಟನೆಯ ಕುರಿತು ದಿನಾಂಕ 31.05.2024 ರಂದು ಪೊಲೀಸರಿಗೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು ಸಾಕ್ಷಿಗೆ ಓದಿ ಹೇಳಲಾಗಿ ಸಾಕ್ಷಿಯು ಒಪ್ಪಿಕೊಳ್ಳದ ಕಾರಣ ಒಪ್ಪಿಕೊಳ್ಳದ ಹೇಳಿಕೆಯನ್ನು **ನಿಪಿ-6** ಎಂದು ಗುರುತಿಸಲಾಗಿದೆ. ನನಗೆ ಪ್ರಕರಣದ ಬಗ್ಗೆ ಎಲ್ಲ ವಿಚಾರಗಳು ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ವಾಟೀ ಸವಾಲು ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.
ಕುಣಿಗಲ್.